## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಶ್ಮಿ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸಸ್ ಮತ್ತು ರೀಸರ್ಚ್ ಸೆಂಟರ್, ಸಂಡೂರು ರಸ್ತೆ, ಗೋವಿಂದಗಿರಿ, ಕೂಡ್ಲಿಗಿ ಇವರಿಗೆ ಹೊಸದಾಗಿ BAMS ಪದವಿ ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:**

1. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಬೆಂಗಳೂರು ಇವರ ಪತ್ರ ಸಂಖ್ಯೆ: **RGUHS/ACA/AFF/F/AY-129/2024-25**, ದಿನಾಂಕ: **26.09.2023.**
2. ಸರ್ಕಾರದ ಪತ್ರ ಸಂಖ್ಯೆ: **HFW 104 PTD 2023**, ದಿನಾಂಕ: **30.09.2023.**
3. ಭಾರತ ಸರ್ಕಾರದ **NCISM**, ನವದೆಹಲಿ, ಇವರ ಪತ್ರ ಸಂಖ್ಯೆ: **4-199/MARB/KA/2024-AY**, ದಿನಾಂಕ: **09.10.2024.**
4. ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ ಸಂಖ್ಯೆ: ಆಯುಷ್/13/ವೈ.ಶಿ.(2)/2023-24, ದಿನಾಂಕ: 10.10.2024.

* * * *

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ.(1)ರ ಪತ್ರದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಶ್ರೀ ಸಿದ್ದಲಿಂಗೇಶ್ವರ ಎಜುಕೇಷನ್ ಟ್ರಸ್ಟ್ (ರಿ) ಇವರ ರಶ್ಮಿ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸಸ್ ಮತ್ತು ರೀಸರ್ಚ್ ಸೆಂಟರ್, ಸಂಡೂರು ರಸ್ತೆ, ಗೋವಿಂದಗಿರಿ, ಕೂಡ್ಲಿಗಿ ಇವರಿಗೆ 2024-25ನೇ ಶೈಕ್ಷಣಿಕ ಸಾಲಿಗೆ 100 ವಿದ್ಯಾರ್ಥಿಗಳ ಪ್ರವೇಶ ಮಿತಿಯಲ್ಲಿ ಹೊಸದಾಗಿ ಬಿಎಎಂಎಸ್ (BAMS) ಪದವಿ ಕೋರ್ಸ್‌ನ್ನು ಪ್ರಾರಂಭಿಸಲು ನಮೂನೆ-5 ರಲ್ಲಿ **Consent of Affiliation** ನೀಡಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (2) ರ ಪತ್ರದಲ್ಲಿ ಶ್ರೀ ಸಿದ್ದಲಿಂಗೇಶ್ವರ ಎಜುಕೇಷನ್ ಟ್ರಸ್ಟ್ (ರಿ) ಇವರ ರಶ್ಮಿ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸಸ್ ಮತ್ತು ರೀಸರ್ಚ್ ಸೆಂಟರ್, ಸಂಡೂರು ರಸ್ತೆ, ಗೋವಿಂದಗಿರಿ, ಕೂಡ್ಲಿಗಿ ಹೆಸರಿನಲ್ಲಿ 100 ವಿದ್ಯಾರ್ಥಿಗಳ ಪ್ರವೇಶ ಮಿತಿಯಲ್ಲಿ ಹೊಸದಾಗಿ ಬಿಎಎಂಎಸ್(BAMS) ಪದವಿ ಕೋರ್ಸ್‌ನ್ನು ಪ್ರಾರಂಭಿಸಲು ನಮೂನೆ-4 ರಲ್ಲಿ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (3)ರ ಪತ್ರದಲ್ಲಿ ಭಾರತ ಸರ್ಕಾರದ National Commission for Indian system of Medicine (NCISM), ನವದೆಹಲಿ ಇವರು ಶ್ರೀ ಸಿದ್ದಲಿಂಗೇಶ್ವರ ಎಜುಕೇಷನ್ ಟ್ರಸ್ಟ್ (ರಿ) ಇವರ ರಶ್ಮಿ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸಸ್ ಮತ್ತು ರೀಸರ್ಚ್ ಸೆಂಟರ್, ಸಂಡೂರು ರಸ್ತೆ, ಗೋವಿಂದಗಿರಿ, ಕೂಡ್ಲಿಗಿ ಇವರಿಗೆ 2024-25ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಬಿ.ಎ.ಎಂ.ಎಸ್. ಪದವಿ ಕೋರ್ಸ್‌ನ್ನು 100 ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು letter of Permission ನೀಡಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(4)ರ ಪತ್ರದಲ್ಲಿ ಆಯುಕ್ತರು, ಆಯುಷ್‌ಇಲಾಖೆ ಇವರು ಭಾರತ ಸರ್ಕಾರದ National Commission for Indian System of Medicine (NCISM), ನವದೆಹಲಿ, ಇವರು ಸದರಿ ಮಹಾವಿದ್ಯಾಲಯಕ್ಕೆ 2024-25ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಬಿ.ಎ.ಎಂ.ಎಸ್. ಪದವಿ ಕೋರ್ಸ್‌ನ್ನು 100 ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು letter of Permission ನೀಡಿರುವುದರಿಂದ ಶ್ರೀ ಸಿದ್ದಲಿಂಗೇಶ್ವರ ಎಜುಕೇಷನ್ ಟ್ರಸ್ಟ್ (ರಿ) ಇವರ

.....2

ರಶ್ಮಿ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸಸ್ ಮತ್ತು ರೀಸರ್ಚ್ ಸೆಂಟರ್, ಸಂಡೂರು ರಸ್ತೆ, ಗೋವಿಂದಗಿರಿ, ಕೂಡ್ಲಿಗಿ ಇವರಿಗೆ ಹೊಸದಾಗಿ ಬಿ.ಎ.ಎಂ.ಎಸ್. (BAMS) ಪದವಿ ಕೋರ್ಸ್‌ನ್ನು 100 ಸೀಟುಗಳ ಪ್ರವೇಶ ಮಿತಿಯೊಂದಿಗೆ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕಾಯ್ದೆ 1994 ಕಲಂ 45ರ ಅನುಸಾರ ಸರ್ಕಾರದ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ, ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ವರದಿ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಶ್ರೀ ಸಿದ್ಧಲಿಂಗೇಶ್ವರ ಎಜುಕೇಷನ್ ಟ್ರಸ್ಟ್ (ರಿ) ಇವರ ರಶ್ಮಿ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸಸ್ ಮತ್ತು ರೀಸರ್ಚ್ ಸೆಂಟರ್, ಸಂಡೂರು ರಸ್ತೆ, ಗೋವಿಂದಗಿರಿ, ಕೂಡ್ಲಿಗಿ, ವಿಜಯನಗರ ಜಿಲ್ಲೆ ಇವರಿಗೆ **2024-25ನೇ** ಶೈಕ್ಷಣಿಕ ಸಾಲಿನಿಂದ **100** ವಿದ್ಯಾರ್ಥಿಗಳ ಪ್ರವೇಶ ಮಿತಿಯೊಂದಿಗೆ ಹೊಸದಾಗಿ ಬಿಎಎಂಎಸ್ **(BAMS)** ಪದವಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಲು ಸರ್ಕಾರವು ನಿರ್ಧರಿಸಿ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 267 ಪಿಟಿಡಿ 2024,**
**ಬೆಂಗಳೂರು. ದಿನಾಂಕ: 15.10.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಸಿದ್ಧಲಿಂಗೇಶ್ವರ ಎಜುಕೇಷನ್ ಟ್ರಸ್ಟ್ (ರಿ) ಇವರ ರಶ್ಮಿ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸಸ್ ಮತ್ತು ರೀಸರ್ಚ್ ಸೆಂಟರ್, ಸಂಡೂರು ರಸ್ತೆ, ಗೋವಿಂದಗಿರಿ, ಕೂಡ್ಲಿಗಿ, ವಿಜಯನಗರ ಜಿಲ್ಲೆ- **583 135.** ಇವರಿಗೆ **2024-25ನೇ** ಶೈಕ್ಷಣಿಕ ಸಾಲಿನಿಂದ **100** (ಒಂದು ನೂರು) ವಿದ್ಯಾರ್ಥಿಗಳ ಪ್ರವೇಶ ಮಿತಿಯೊಂದಿಗೆ ಹೊಸದಾಗಿ ಬಿಎಎಂಎಸ್ **(BAMS)** ಪದವಿ ಕೋರ್ಸ್ ಪ್ರಾರಂಭಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

**ಸಂಸ್ಥೆಯು ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು:-**

1. ಕಾಲೇಜನ್ನು ಪ್ರಾರಂಭಿಸುವ ಮುನ್ನ ಅಗತ್ಯವಿರುವ ಎಲ್ಲಾ ಮೂಲ ಸೌಲಭ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
2. ಸಂಸ್ಥೆಗೆ ಹೊಂದಿಕೊಂಡಿರುವ ಆಸ್ಪತ್ರೆಯನ್ನು **L-4 (Teaching Hospital)** ಬೋಧನಾ ಆಸ್ಪತ್ರೆ ಎಂದು ಕರ್ನಾಟಕ ಖಾಸಗಿ ವೈದ್ಯಕೀಯ ಸಂಶೋಧನಾ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ನೋಂದಣಿ ಪಡೆದು ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
3. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮ/ ಆದೇಶಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು ಮತ್ತು ಸರ್ಕಾರಿ ಕೋಟಾ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.
4. ರಾಜ್ಯ/ ಕೇಂದ್ರ ಸರ್ಕಾರವು ಕಾಲ-ಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
5. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.
6. ಸರ್ಕಾರ/ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ, ಯಾವುದೇ ಕಾರಣಕ್ಕೂ ಕಾಲೇಜಿನ ಹೆಸರು ಮತ್ತು ವಿಳಾಸವನ್ನು ಬದಲಾಯಿಸುವಂತಿಲ್ಲ.

.....3

7. ಸರ್ಕಾರವು ಕಾಲ-ಕಾಲಕ್ಕೆ ನಿಗಧಿಪಡಿಸುವ ಕೋರ್ಸ್‌ನ ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆಯತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ಸೀಟುಗಳಲ್ಲಿ ಕಾಲಕಾಲಕ್ಕೆ ಸರ್ಕಾರವು ನಿಗದಿಪಡಿಸುವ ಅನುಪಾತದಲ್ಲಿ ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.
8. ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಆಯುಕ್ತರು, ಆಯುಷ್ ಇಲಾಖೆ, ಇವರು, ಖಚಿತಪಡಿಸಿಕೊಳ್ಳುವುದು.
9. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದಲ್ಲಿ ಸಂಯೋಜನೆ/ ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

**(ಪವಿತ್ರ)**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಆವೈಪ ಮತ್ತು ಸಮನ್ವಯ)

**ಇವರಿಗೆ:-**

1. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು-560 009.
2. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಬ್ಲಾಕ್, ಜಯನಗರ, ಬೆಂಗಳೂರು-41.
3. ಅಧ್ಯಕ್ಷರು, **Sri Siddalingeshwra Education Trust ®, Kudligi, Vijayanagara District – 583 135.**
4. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿ, ಇವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.